ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ದೈ.ಶಿ/ಯೋಗಾಥಾನ್-2022/20/2022-23 ದಿನಾಂಕ: 06.08.2022

:ಜ್ಞಾಪನ:

ವಿಷಯ: ಯೋಗಥಾನ್-2022 ರ ಕಾರ್ಯಕ್ರಮದ ಅನುಷ್ಠಾನಕ್ಕೆ ಇಲಾಖೆಯ ಸಂಬಂಧಿಸಿದ ಅಂಶಗಳಿಗೆ ಪೂರ್ಣ ಸಹಕಾರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪತ್ರ ಸಂಖ್ಯೆ; ಇಪಿ.195.ಎಂ.ಹೆಚ್.ಟಿ 2022 ದಿನಾಂಕ 01.08.2022.

***************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ದಿನಾಂಕ 11.07.22 ರಂದು ರಾಜ್ಯ ಸರ್ಕಾರವು ಯೋಗಥಾನ್-2022 ಕಾರ್ಯಕ್ರಮವನ್ನು ಅಧಿಕೃತವಾಗಿ ಅನಾವರಣಗೊಳಿಸಲಾಗಿರುತ್ತದೆ. ಆರೋಗ್ಯ ಹಾಗೂ ಆನಂದಕ್ಕಾಗಿ ಯೋಗ ಕುರಿತು ಕಾರ್ಯಕ್ರಮದಲ್ಲಿ ಪ್ರಚಾರಪಡಿಸಲಾಗಿದೆ. ಯೋಗಥಾನ್-2022 ಕಾರ್ಯಕ್ರಮವನ್ನು ಆಯುಷ್ ಟಿ.ವಿ ಮತ್ತು Miracle Drinks (Health Sponsor) ಸಹಯೋಗದೊಂದಿಗೆ ಆಯೋಜಿಸಲಾಗಿರುತ್ತದೆ. ಮೊರಾರ್ಜಿ ದೇಸಾಯಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಯೋಗ (MDNIY) ಹಾಗೂ ಯೋಗ ಸರ್ಟಿಫಿಕೇಷನ್ ಬೋರ್ಡ್ (YCB) ಸಹಯೋಗದೊಂದಿಗೆ ಯೋಗ ಶಿಕ್ಷಣ ಶಾಸ್ತ್ರ ಹಾಗೂ ತರಬೇತುದಾರರು ಮತ್ತು ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗುವುದು ಎಂದು ತಿಳಿಸಲಾಗಿದೆ.

ಮುಂದುವರೆದು ದಿನಾಂಕ: 28.08.2022 ರಂದು ರಾಜ್ಯದ ವಿವಿಧ ಸ್ಥಳಗಳಲ್ಲಿ ಅತೀ ಹೆಚ್ಚು ಯೋಗಾಸನ ಪ್ರದರ್ಶನದಾರರು ಒಂದೇ ಸಮಯದಲ್ಲಿ ಯೋಗ ಪ್ರದರ್ಶಿಸಿ ಗಿನ್ನೀಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ (Guinness Book of Records-GWR) ಪ್ರಯತ್ನಿಸುವುದಾಗಿ ತಿಳಿಸಿರುತ್ತಾರೆ. (**5,00,000 ಕ್ಕೂ ಹೆಚ್ಚು ಪ್ರದರ್ಶನದಾರರು 60ಕ್ಕೂ ಹೆಚ್ಚು ಸ್ಥಳಗಳಲ್ಲಿ ಸದರಿ GWR ಮುಖ್ಯ ಅಗತ್ಯತೆ ಪ್ರತಿ ಪ್ರದರ್ಶನದಾರರಿಗೆ Unique QR Code based ID**)

ಸದರಿ ಯೋಗಥಾನ್-2022 ಕಾರ್ಯಕ್ರಮದಲ್ಲಿ ಶಾಲೆಗಳು ಭಾಗವಹಿಸುವುದರಿಂದ ಈ ಕೆಳಕಂಡ ಲಾಭಗಳನ್ನು ಪಡೆಯಬಹುದು ಎಂದು ತಿಳಿಸಿರುತ್ತಾರೆ.

1. ಪ್ರಸ್ತುತ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ಶಿಕ್ಷಕರು AYUSH TV ಮುಖಾಂತರ ತರಬೇತಿ ಪಡೆದು ಹಾಗೂ ಆನ್‌ಲೈನ್ ಮೌಲ್ಯಮಾಪನದ ನಂತರ ಯೋಗ ತರಬೇತುದಾರರಾಗಿ ಯೋಗ ಸರ್ಟಿಫಿಕೇಷನ್ ಬೋರ್ಡ್ (YCB) ಪ್ರಮಾಣ ಪತ್ರ ನೀಡಲಾಗುತ್ತದೆ.
2. ಎಂಟು ವಾರಾಂತ್ಯಗಳಲ್ಲಿ (GWR ಸಮಾವೇಶ ಸಹಿತ) ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳು YCB Yoga Volunteer Certificate ನ್ನು ಅತ್ಯಲ್ಪ ಶುಲ್ಕದ ಪಾವತಿಯೊಂದಿಗೆ ಪಡೆಯಬಹುದು ಎಂದು ತಿಳಿಸಿರುತ್ತಾರೆ.
3. ಶಾಲಾ ವಿದ್ಯಾರ್ಥಿಗಳು ತಮ್ಮ ಸಮವಸ್ತ್ರಗಳಲ್ಲಿ ಹಾಗೂ ಶಾಲಾ ಬ್ಯಾನರ್‌ಗಳೊಂದಿಗೆ ಗಿನ್ನೀಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ (Guinness Book of Records-GWR) ಅತ್ಯಲ್ಪ ಶುಲ್ಕದ ಪಾವತಿಯೊಂದಿಗೆ ಶಾಲೆಗಳು ಹಾಗೂ ವಿದ್ಯಾರ್ಥಿಗಳು ಪ್ರಮಾಣ ಪತ್ರವನ್ನು ಪಡೆಯಬಹುದು ಎಂದು ತಿಳಿಸಿರುತ್ತಾರೆ.

ಯೋಗಥಾನ್-2022 ಕಾರ್ಯಕ್ರಮ ಯಶಸ್ವಿಯಾಗಲು ಶಾಲೆಗಳ ಭಾಗವಹಿಸುವಿಕೆ ಬಹಳ ಪ್ರಮುಖವಾದದ್ದು, ಆದ್ದರಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಈ ಕೆಳಕಂಡ ಸಹಕಾರವನ್ನು ನೀಡಲು ತಿಳಿಸಿದೆ.

1. ಶಾಲಾ ಶಿಕ್ಷಣದ ತಂತ್ರಾಂಶ SATS ಪೋರ್ಟಲ್‌ನಲ್ಲಿ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಯೋಗಾಥನ್-2022 ರ ಲಿಂಕ್ register@yogathon2022.com ಅಳವಡಿಸಲಾಗಿದೆ.
2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಒಟ್ಟು 2.5 ಲಕ್ಷ ವಿದ್ಯಾರ್ಥಿಗಳ ಗುರಿಯನ್ನು ನಿಗದಿಪಡಿಸಿದ್ದು, ಜಿಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಬ್ಲಾಕ್ ನಲ್ಲಿ ನೋಂದಣಿಯಾಗಿರುವ (YCB) Yoga Volunteer Certificate ಪಡೆದಿರುವ) ದೈಹಿಕ ಶಿಕ್ಷಕರು/ಆಸಕ್ತ ಶಿಕ್ಷಕರಿಗೆ ತಲಾ 30 ವಿದ್ಯಾರ್ಥಿಗಳನ್ನು ಯೋಗಥಾನ್ ಕಾರ್ಯಕ್ರಮಕ್ಕೆ ನೋಂದಾಯಿಸಿ ಅವರಿಗೆ ತರಬೇತಿ ನೀಡುವುದು. ಅತೀ ಹೆಚ್ಚು ಶಾಲೆಗಳನ್ನು ತಮ್ಮ ಹಂತದಲ್ಲಿ ಕಾರ್ಯಕ್ರಮಕ್ಕೆ ನೋಂದಾಯಿಸಲು ಕ್ರಮ ಕೈಗೊಳ್ಳುವುದು.
3. ಜಿಲ್ಲಾ ಹಂತದಲ್ಲಿ ಕಾರ್ಯಕ್ರಮದ ಆಯೋಜನೆಗಾಗಿ ಈಗಾಗಲೇ ಸ್ಥಳವನ್ನು ನಿಗದಿಪಡಿಸಲಾಗಿದೆ. ಯೋಗಥಾನ್ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಮಾಸ್ಕ್, ಯೋಗ ಮ್ಯಾಟ್, ನೀರಿನ ಬಾಟಲ್ ನ್ನು ಸ್ವತಃ ವಿದ್ಯಾರ್ಥಿಗಳೇ ತರುವುದು. ಹಾಗೂ ವಿದ್ಯಾರ್ಥಿಗಳು ಬಿಳಿಬಣ್ಣದ ಸಮವಸ್ತ್ರದೊಂದಿಗೆ ಯೋಗಥಾನ್ ಕಾರ್ಯಕ್ರಮಕ್ಕೆ ಹಾಜರಾಗುವುದು.
4. ಜಿಲ್ಲಾವಾರು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ನೋಂದಣಿ ಮಾಹಿತಿಯನ್ನು ಲಗತ್ತಿಸಿರುವ ನಮೂನೆಯಲ್ಲಿ ಭರ್ತಿ ಮಾಡಿ ಇಂದು ಸಂಜೆ 5.00 ರೊಳಗಾಗಿ jdpevkn@gmail.com ಗೆ ಕಳುಹಿಸುವುದು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಯೋಗಥಾನ್-2022 ಕಾರ್ಯಕ್ರಮಕ್ಕೆ ಹೆಚ್ಚಿನ ಪ್ರಚಾರ ನೀಡಿ ಯಶಸ್ವಿಗೊಳಿಸಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದೆ.

--2

| ಕ್ರ.ಸಂ | ಜಿಲ್ಲೆ | ತಾಲ್ಲೂಕು | ನೋಂದಣಿಗೊಂಡ ದೈಹಿಕ ಶಿಕ್ಷಕರ/ಆಸಕ್ತ ಶಿಕ್ಷಕರ ಹೆಸರು | ಶಿಕ್ಷಕರ ಶಾಲಾ ವಿಳಾಸ | ರೆಫರಲ್ ಕೋಡ್ | ಪ್ರತಿ ಶಿಕ್ಷಕರು ತರಬೇತಿ ನೀಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | ಷರಾ |
|---|---|---|---|---|---|---|---|
| | | | | | | | |

06/08/2022

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಗಳು:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ರವರಿಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೃಪತುಂಗ ರಸ್ತೆ ರವರಿಗೆ ಮಾಹಿತಿಗಾಗಿ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡ ರವರಿಗೆ ಮಾಹಿತಿಗಾಗಿ.

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ತಾಲ್ಲೂಕು ಕ್ಷೇತ್ರಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
4. ಹಿರಿಯ ಸಹಾಯಕ ನಿರ್ದೇಶಕರು SATS ಪೋರ್ಟಲ್‌ನಲ್ಲಿ register@yogathon2022.com ಲಿಂಕ್ ಅಳವಡಿಸಲು ಕ್ರಮಕ್ಕಾಗಿ ಸಲ್ಲಿಸಿದೆ.
5. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ರವರು ಸದರಿ ಜ್ಞಾಪನವನ್ನು www.schooleducation.com ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ತುರ್ತು ಕ್ರಮ ಕೈಗೊಳ್ಳುವುದು.
6. ಕಛೇರಿ ಪ್ರತಿ